ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸೆಷನ್ಸ್ ಕೇಸ್ ನಂಬರ್ : 167/2021**

**ಫ್ರಾಸಾ- 15 ಚಾಸಾ- 16**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಮಂಜುನಾಥ ನಾಯಕ್ |
| ತಂದೆಯ ಹೆಸರುಃ | : | ಮಹದೇವ ನಾಯಕ್ |
| ವಯಸ್ಸುಃ | : | 38 ವರ್ಷ |
| ಉದ್ಯೋಗಃ | : | ಪಿ ಎಸ್ ಐ |
| ವಾಸ | : | ಮೈಸೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:03-01-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ನಾನು 28-4-20 ರಿಂದ 3-6-21 ರವರೆಗೆ ನಾನು ಆಲೂರು ಪಿ ಎಸ್ ನಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿನಾಂಕ 17-11-20 ರಂದು ಚಾಸಾ-15 ರವರಿಂದ ಈ ಪ್ರಕರಣದ ಕಡತವನ್ನು ಪಡೆದುಕೊಂಡು ತನಿಖೆ ಮುಂದುವರೆಸಿ ದೂರುದಾರರಿಗೆ ಘಟನಾ ವಿಚಾರವನ್ನು ತಮ್ಮ ಮೇಲಧಿಕಾರಿಗಳಿಗೆ ಯಾವ ಸಮಯದಲ್ಲಿ ತಿಳಿಸಿರುತ್ತಾರೆಂಬ ಬಗ್ಗೆ ಮಾಹಿತಿ ನೀಡುವಂತೆ ಪತ್ರ ಕಳುಹಿಸಿರುತ್ತೇನೆ.

3.ದಿನಾಂಕ 4-12-20ರಂದು ಗಾಯದ ಪ್ರಮಾಣಪತ್ರವನ್ನು ಈಗಾಗಲೇ ಗುರುತಿಸಿದ ನಿಪಿ-11 ರಂತೆ ಸ್ವೀಕರಿಸಿದೆನು. ಅದರಲ್ಲಿ ನನ್ನ ರುಜು ಇದ್ದು ನಿಪಿ-11(ಬಿ) ಎಂದು ಗುರುತಿಸಲಾಯಿತು.

4.ದಿನಾಂಕ 24-12-20ರಂದು ಆಲೂರು ಪಿ ಎಸ್ ಗೆ ಪಿರ್ಯಾದಿದಾರರು ಹಾಜರಾಗಿ ನೀಡಿದ ಡಿವಿಅರ್ ನ್ನು ಪಂಚರ ಸಮಕ್ಷಮ ವಶಕ್ಕೆ ಪಡೆದು ಈಗಾಗಲೇ ಗುರುತಿಸಿದ ನಿಪಿ-3 ರಂತೆ ಪಂಚನಾಮೆ ನಡೆಸಿದೆನು. ಅದರಲ್ಲಿ ನನ್ನ ರುಜು ಇದ್ದು ನಿಪಿ-3(ಡಿ) ಎಂದು ಗುರುತಿಸಲಾಯಿತು. ವಶಪಡಿಸಿಕೊಂಡ ಡಿವಿ ಆರ್ ನ್ನು ನೋಡಿದರೆ ಗುರುತಿಸುತ್ತೇನೆ. ಅದು ನ್ಯಾಯಾಲಯದ ಮುಂದಿರುವ ಎಂ.ಒ.4 ಆಗಿರುತ್ತದೆ. ಅದನ್ನು ಪಿ ಎಫ್ ನಲ್ಲಿ ಅಳವಡಿಸಿ ನಿವೇದಿಸಿಕೊಂಡೆನು.

(ಈ ಹಂತದಲ್ಲಿ ಸಾಕ್ಷಿಯು ಡಿ ವಿ ಆರ್ ನಿಂದ ತಾನು ಕೆಲವು ಫೋಟೋಗಳನ್ನು ಠಾಣಾ ಲ್ಯಾಪ್ ಟಾಪ್ ನಲ್ಲಿ ಹಾಕಿ ತೆಗೆದಿರುತ್ತೇನೆಂದು ಹೇಳಿರುವುದರಿಂದ ಸದರಿ ಡಿವಿಆರ್ ನ್ನು ಪ್ಲೇ ಮಾಡಿ ನೋಡಲು ಸರಿಯಾದ ಉಪಕರಣ ನ್ಯಾಯಾಲಯದಲ್ಲಿ ಲಭ್ಯವಿಲ್ಲದ್ದರಿಂದ ಹಾಜರಿರುವ ಠಾಣೆಯ ಹೆಚ್ ಸಿ 287ರವರಿಗೆ ಮುಂದಿನ ದಿನಾಂಕದಂದು ಅದನ್ನು ಪ್ಲೇ ಮಾಡಿ ನೋಡಲು ಬೇಕಾದ ಉಪಕರಣವನ್ನು ತರುವಂತೆ ಸೂಚಿಸಿ ಮುಂದುವರೆದ ಮುಖ್ಯವಿಚಾರಣೆಯನ್ನು ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**